**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 184/2023**

ಪಿಡಬ್ಲ್ಯೂ: 12
ಸಿಡಬ್ಲ್ಯೂ: 21

| | | |
|---|---|---|
| ಹೆಸರು | : | ಮಂಜಪ್ಪ ಕುಪ್ಪೇಲೂರ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಪಿ ಐ |
| ವಾಸಸ್ಥಳ | : | ದಾವಣಗೆರೆ |

ದಿನಾಂಕ : 29.11.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ದಿನಾಂಕಃ 08.06.2023 ರಂದು ಪ್ರಕರಣದ ಕಡತವನ್ನು ಚಾಸಾ-20 ರವರಿಂದ ಪಡೆದುಕೊಂಡು ಅದೇ ದಿನ ಚಾಸಾ-12 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕಃ 26.06.2023 ರಂದು ಎಫ ಎಸ ಎಲ್ ವರದಿ ಚಾಸಾ-18 ರವರ ಮುಖಾಂತರ ಸ್ವೀಕರಿಸಿರುತ್ತೇನೆ. ದಿನಾಂಕಃ 28.06.2023 ರಂದು ಚಾಸಾ-18 ರವರ ಕಡೆಯಿಂದ ಅಂತಿಮ ವರದಿ ಪಡೆದಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಿಪಿ-17 ರ ಮೇಲಿನ ಸಹಿಯನ್ನು ನಿಪಿ-17(ಎ) ಎಂದು, ನಿಪಿ-18 ರ ಮೇಲಿನ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಚಾಸಾ-12 ರವರ ಹೇಳಿಕೆ ಪಡೆದಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ

ಸರಿಯಲ್ಲಾ. ದಿಃ 26.06.2023 ರಂದು ಎಫ ಎಸ್ ಎಲ್ ವರದಿಯನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಪಡೆದಿರುತ್ತೇನೆ ಅಂದರೆ ಸರಿಯಲ್ಲಾ. ಅದೇ ರೀತಿ ವೈದ್ಯಾಧಿಕಾರಿಯಿಂದ ಸುಳ್ಳು ವರದಿಯನ್ನು ಪಡೆದಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತನಿಗೆ ತೊಂದರೆ ಕೊಡಲು ಚಾಸಾ–01 ರವರ ಮಾತು ಕೇಳಿ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸ ಅದೆ.

Sd/-

ಜೆಎಂಎಫ್‌ಸಿ, ಬ್ಯಾಡಗಿ.